ಓ.ಎಸ್. – 159/2022

ಪಿ. ಡಬ್ಲೂ – 1

ಸಾಕ್ಷಿಯನ್ನು ದಿಃ 25.11.2025 ರಂದು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ 1 ರಿಂದ 3 ನೇ ಪ್ರತಿವಾದಿಯ ಪರಃ ಎಜಿಪಿ ರವರಿಂದಃ–**

ನಮಗೆ ಮಂಜೂರಾಗಿರುವ 2 ಎಕರೆ 20 ಗುಂಟೆ ಜಮೀನು ಮಂಕೋಡು ಗ್ರಾಮದ ಸರ್ವೇ ನಂಬರ್ 16 ರಲ್ಲಿ ಇದೆ. ಯಾವುದೇ ಸ್ವತ್ತನ್ನು ಮಂಜೂರು ಮಾಡುವ ಮೊದಲು ಸ್ಥಳ ಪರಿಶೀಲನೆ ಮಾಡಿ ನಕ್ಷೆ ತಯಾರಿಸಿ ನಂತರ ಅಳತೆ ಮಾಡುತ್ತಾರೆ ಎಂದರೆ ಸರಿ. ಸರ್ವೇ ನಂಬರ್ 16 ರಲ್ಲಿ ನಮಗೆ ಮಂಜೂರಾಗಿರುವ 2 ಎಕರೆ 20 ಗುಂಟೆಯನ್ನು ಹೊರತು ಪಡಿಸಿ ಉಳಿದ ಜಾಗ ಸರ್ಕಾರಿ ಜಾಗ ಎಂದರೆ, ನನ್ನಂತೆ ಒಟ್ಟು 5 ಜನರಿಗೆ ಸದರಿ ಜಾಗದಲ್ಲಿ ಮಂಜೂರಾತಿ ಆಗಿರುತ್ತದೆ. ಮುಂದುವರೆದು ಉಳಿದ ಜಾಗವು ಸರ್ಕಾರಿ ಜಾಗವಾಗಿಯೇ ಉಳಿದಿದೆ ಎನ್ನುತ್ತಾರೆ. ದಾವಾ ಸ್ವತ್ತಿನ ನಕ್ಷೆಯನ್ನು ನಾನು ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ಸರ್ಕಾರಿ ಜಾಗವನ್ನು ಅತೀಕ್ರಮಣ ಮಾಡಲು ನಾನು ಉದ್ದೇಶಪೂರ್ವಕವಾಗಿ ನಕ್ಷೆಯನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

24.07.2022 ರಂದು ನಾವು ಸರ್ಕಾರಿ ಜಾಗವನ್ನು ಅತೀ ಕ್ರಮಣ ಮಾಡಿದ್ದೇವೆ ಎಂದು ಸಾರ್ವಜನಿಕರಿಂದ ಬಂದ ದೂರನ್ನು ಸ್ವೀಕರಿಸಿದ ನಂತರ ಪ್ರತಿವಾದಿಯರು ಮಂಕೋಡು ಗ್ರಾಮದ ಸರ್ವೇ ನಂಬರ್ 16 ಅನ್ನು ಅಳತೆ ಮಾಡಿ ಅಕ್ರಮ ಅತೀಕ್ರಮಣ ಮಾಡಿರುವವರನ್ನು ತೆರವುಗೊಳಿಸಿ ಈ ಬಗ್ಗೆ ಮಹಜರನ್ನು ಮಾಡಿ ಸದರಿ ಸ್ವತ್ತನ್ನು ಅತೀಕ್ರಮಣ ಮಾಡದಂತೆ ಎಚ್ಚರಿಕೆ ನೋಟೀಸ್ ಅನ್ನು ಸಹ ಸ್ಥಳದಲ್ಲಿ ಅಂಟಿಸಿರುತ್ತಾರೆ ಎಂದರೆ ಸರಿಯಲ್ಲ. ನಮಗೆ ಮಂಜೂರಾದ ಕ್ಷೇತ್ರವನ್ನು ಹೊರತು ಪಡಿಸಿ ಹೊಸದಾಗಿ ಸರ್ಕಾರಿ ಜಾಗವನ್ನು ಅತೀಕ್ರಮಿಸಲು ನಾನು ಪ್ರಯತ್ನ ಮಾಡಿದ್ದೇನೆ ಎನ್ನುವುದು ಸರಿಯಲ್ಲ. ಪ್ರತಿವಾದಿಯರು ಸರ್ಕಾರಿ ಜಾಗವನ್ನು ರಕ್ಷಣೆ ಮಾಡಲು ಸರ್ವೇ ನಂಬರ್ 16 ಅನ್ನು ಅಳತೆ ಮಾಡಿದ್ದಾರೆ ಹೊರತು ನನಗೆ ಮಂಜೂರಾಗಿರುವ ಸ್ವತ್ತಿನ ಸ್ವಾಧೀನಕ್ಕೆ ಯಾವುದೇ ಅಡ್ಡಿ ಪಡಿಸಿಲ್ಲ ಎನ್ನುವುದು ಸರಿಯಲ್ಲ. ಸರ್ವೇ ನಂಬರ್ 16 ದನಗಳ ಮುಪ್ಪತ್ತಿನ ಜಾಗ ಎಂದರೆ ಸರಿಯಲ್ಲ. ಸರ್ಕಾರಿ ಜಾಗವನ್ನು ಅಕ್ರಮವಾಗಿ ಕಬಳಿಸಲು ಪ್ರತಿವಾದಿಯ ವಿರುದ್ಧ ಈ ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಈ ದಾವೆ ದಾಖಲಿಸುವ ಪೂರ್ವದಲ್ಲಿ ಪ್ರತಿವಾದಿಯರಿಗೆ ಕಾನೂನುಬದ್ಧ ನೋಟೀಸ್ ಅನ್ನು ಜಾರಿಗೊಳಿಸಿಲ್ಲ ಎಂದರೆ ಸರಿಯಲ್ಲ. ದಾವೆಯಲ್ಲಿ ಕೋರಿದ ಯಾವುದೇ ಪರಿಹಾರಕ್ಕೆ ನಾನು ಅರ್ಹನಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)

ಓದಿ ಹೇಳಿ ಕೇಳಿ ಸರಿ ಇದೆ

ಪ್ರಧಾನ ವ್ಯವಹಾರ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಸಾಗರ.